ಶ್ರೀ ಹೆಚ್.ಡಿ. ಬಸವರಾಜ್:- ಮಾನ್ಯ ಅಧ್ಯಕ್ಷರೆ, ಈಗ ಪಂಚಾಯಿತಿಯಲ್ಲಿ ತೀರ್ಮಾನವಾಗಿದ್ದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಬೇಕು. ಜಿಲ್ಲಾ ಪಂಚಾಯಿತಿಯವರು ನಿರ್ಧಾರ ಮಾಡಿದರು . ಅಂದರೆ ತಾಲ್ಲೂಕು ಪಂಚಾಯಿತಿಗಳು ನಿಮ್ಮ ಕರಡು ನಿಯಮಗಳನ್ನು ನೀವೇನು ತಯಾರು ಮಾಡುತ್ತೀರೋ ಅಲ್ಲಿಯವರೆಗೆ ತಾಲ್ಲೂಕು ಪಂಚಾಯಿತಿಗಳನ್ನು ಸ್ಥಗಿತಗೊಳಿಸಬೇಕು. ಏಕೆಂದರೆ ಅವರು ಅಲ್ಲಿ ನಿರ್ಧಾರ ಮಾಡುವುದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟರೆ, ಅವರು ಅನುಮೋದನೆಯನ್ನು ಮಾಡಲೂ ಬಹುದು ಮಾಡದೇ ಇರಲೂಬಹುದು. ಹಾಗೆ ಇದ್ದಮೇಲೆ ತಾಲ್ಲೂಕು ಪಂಚಾಯಿತಿ ವ್ಯವಸ್ಥಿತ ರೀತಿಯಲ್ಲಿ ಹೇಗೆ ಕೆಲಸ ಮಾಡಬೇಕಾಗಿದೆ? ನಿಮ್ಮ ಕರಡು ನಿರ್ಣಯ ಯಾವ್ಯಾವುದು ತಯಾರಾಗಬೇಕಾಗಿದೆಯೋ ಅಲ್ಲಿಯವರೆಗೂ ಕೆಲಸ ಮಾಡುವುದು ಬೇಡವೆಂದು ದಯವಿಟ್ಟು ಒಂದು ಸುತ್ತೋಲೆಯನ್ನು ಕಳುಹಿಸಿದರೆ ಉತ್ತಮವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾಮಗಾರಿಗಳು ಕಳಪೆಮಟ್ಟದಲ್ಲಿ ನಡೆಯುತ್ತಿವೆ. ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ವ್ಯವಸ್ಥಿತ ರೀತಿಯಲ್ಲಿ ಅದನ್ನು ಪರಿಶೀಲನೆ ಮಾಡುವಂತಹ ಯಾವುದೇ ಒಂದು ವಿಂಗ್ ಇಲ್ಲ. ಗುಣ ನಿಯಂತ್ರಣವನ್ನು ಮಾಡಬೇಕೆಂದರೆ ಸರ್ಕಾರ ಏನು ಮಾಡುತ್ತಿದೆ? ಗುಣಮಟ್ಟವನ್ನು ಕಾಪಾಡುವಂತಹ ಕೆಲಸಕಾರ್ಯಗಳನ್ನು ಮಾಡುತ್ತಿರುವವರ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗುತ್ತಿದೆ? ಅದನ್ನು ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಕರಡು ನಿಯಮಗಳನ್ನು ಜಾರಿಗೆ ತರುವವರೆಗೆ ಕೆಲಸಗಳನ್ನು ಸ್ಥಗಿತಗೊಳಿಸಬೇಕೆಂದು ಹೇಳತಕ್ಕ ಮಾನ್ಯ ಸದಸ್ಯರ ಸಲಹೆ ಯಾವುದು ಇದೆ ಈ ಸಲಹೆಯಿಂದ ಯಾರಿಗೂ ಲಾಭವಾಗುವುದಿಲ್ಲ. ತಾಲ್ಲೂಕಿನಲ್ಲಿ ಕೆಲಸ ಆಗಲೇಬೇಕಾಗುತ್ತದೆ. ಆ ಕೆಲಸ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮುಖಾಂತರವಾದರೆ ಜಿಲ್ಲಾ ಪಂಚಾಯಿತಿಯವರು ಹಣವನ್ನು ಒದಗಿಸುತ್ತಾರೆ. ಕರಡು ನಿಯಮಗಳು ಜಾರಿಗೆ ಬಂದ ಮೇಲೆ ತಾಲ್ಲೂಕು ಪಂಚಾಯಿತಿಗಳಿಗೆ ಹಣವನ್ನು ನೇರವಾಗಿ ಬಿಡುಗಡೆ ಮಾಡುತ್ತೇವೆ. ಎರಡನೆಯದಾಗಿ ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿ ವತಿಯಲ್ಲಿ ಕಳಪೆ ಕೆಲಸ ಆಗುತ್ತಾ ಉಂಟು ಅಂತ ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನೂ ಮತ್ತು ಮಾನ್ಯ ಸದಸ್ಯರಾದ ಬಸವರಾಜ್‌ರವರು ಇಬ್ಬರೂ ಜಿಲ್ಲಾ ಪಂಚಾಯತಿಯ ಸದಸ್ಯರು. ಪ್ರತಿ ಮೀಟಿಂಗ್‌ನಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಎಲ್ಲಿಕಳಪೆ ಕೆಲಸ ಆಗಿದೆಯೆಂದು ಹೇಳುವುದನ್ನು ದಯವಿಟ್ಟು ನನ್ನ ಗಮನಕ್ಕೆ ತನ್ನಿ. ಇಲ್ಲ ಜಿಲ್ಲಾ ಪಂಚಾಯಿತಿಯ ಗಮನಕ್ಕೆ ತನ್ನಿ, ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೇನೆ. ನಿಮ್ಮ ಕ್ಷೇತ್ರದಲ್ಲಿ ಕೂಡ ನಾನು ಬಹಳಷ್ಟು ಅಡ್ಡಾಡಿದ್ದೇನೆ. ಎಲ್ಲೆಲ್ಲಿ ಅಧಿಕಾರಿಗಳು ಅವ್ಯವಹಾರ ನಡೆಸಿದ್ದಾರೆ, ಅದರ ಬಗ್ಗೆ ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಎದುರುಗಡೆ ನಮ್ಮ ಚಿಂತನೆಯನ್ನು ಹೇಳಿದ್ದೇನೆ. ಬಹುಶಃ ಎಲ್ಲಿಯಾದರೂ ನಿರ್ದಿಷ್ಟವಾಗಿರತಕ್ಕ ಕಳಪೆ ಕೆಲಸಗಳನ್ನು ತಾವು ದಯವಿಟ್ಟು ನನ್ನ ಗಮನಕ್ಕೆ ತನ್ನಿ, ಜಿಲ್ಲಾ ಉಸ್ತುವಾರಿ ಸಚಿವನಾಗಿ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ತಿಪಟೂರು ತಾಲ್ಲೂಕಿನ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 50(218)

ಶ್ರೀ ಬಿ.ನಂಜಾಮರಿ (ತಿಪಟೂರು):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ತಿಪಟೂರಿನ 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ತಿಪಟೂರು ತಾಲ್ಲೂಕಿನಲ್ಲಿ 48 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. 48 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು 1995-96ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತದೆ. ಈಗಾಗಲೇ ಒಟ್ಟು 11 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಲ್ಲಿ 4 ಕೊಳವೆ ಬಾವಿಗಳನ್ನು ಕ್ರಿಯಾ ಯೋಜನೆಯಡಿಯಲ್ಲಿ ಮತ್ತು 7 ಕೊಳವೆಬಾವಿಗಳನ್ನು ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕೊರೆಯಲಾಗಿದೆ. ಉಳಿದ 37 ಗ್ರಾಮಗಳಲ್ಲಿ ಅತ್ಯಂತ ಕಡಿಮೆ ಸರಬರಾಜು ಇರುವ ಗ್ರಾಮಗಳಿಗೆ ಆದ್ಯತೆ ನೀಡಿ ಕೊಳವೆ ಬಾವಿಗಳನ್ನು ಕೊರೆಯಲು ಜಿಲ್ಲಾ ಪಂಚಾಯತಿಗೆ ನಿರ್ದೇಶನ ನೀಡಲಾಗುತ್ತಿದೆ.

ಶ್ರೀ ಬಿ.ನಂಜಾಮರಿ:- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ನೂರಕ್ಕಿಂತ ಹೆಚ್ಚಿಗೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆಯಿದೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಪಟೂರು ತಾಲ್ಲೂಕು 48 ಗ್ರಾಮಗಳಲ್ಲಿ 11 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಇನ್ನು 37 ಬೋರ್‌ವೆಲ್‌ಗಳನ್ನು ಕೊರೆಯಲು ಜಿಲ್ಲಾ ಪಂಚಾಯಿತಿಗೆ ಆದೇಶ ನೀಡಲಾಗಿದೆಯೆಂದು ಹೇಳುತ್ತಿದ್ದಾರೆ. ಆದರೆ ನಾನು ಹಳ್ಳಿಗಳಿಗೆ ಹೋಗಿ ತಿಳಿದುಕೊಂಡು ಬಂದ ಹಾಗೆ 118 ಬೋರ್‌ವೆಲ್‌ಗಳು ಬತ್ತಿ ಹೋಗಿವೆ. ಸರ್ಕಾರ 48ರಲ್ಲಿ ಮಾತ್ರ ತೊಂದರೆಯಿದೆ, 37 ಬೋರ್‌ವೆಲ್‌ಗಳನ್ನು ಕೊರೆಯಲು ಆದೇಶಿಸಲಾಗಿದೆಯೆಂದು ಹೇಳಿದೆ. ಇವತ್ತು ನಾವು ಹಳ್ಳಿಗಳಿಗೆ ಹೋಗುವ ಪರಿಸ್ಥಿತಿಯೇ ಇಲ್ಲ. ಆ ರೀತಿಯಾಗಿದೆ ನೀರಿನ ಸಮಸ್ಯೆ. ನೀರು ಒದಗಿಸುತ್ತಿದ್ದ 118 ಬೋರ್‌ವೆಲ್‌ಗಳು ಇವತ್ತು ಬತ್ತಿ ಹೋಗಿವೆ. ಇನ್ನು 48 ಬೋರ್‌ವೆಲ್‌ಗಳ ಕೊರತೆಯಿದೆಯೆಂದು ಸರ್ಕಾರ ಉತ್ತರ ಕೊಟ್ಟಿದೆ. ನಮಗೆ ತುಂಬಾ ತೊಂದರೆಯಾಗಿದೆ ಕೂಡಲೇ ಬೋರ್‌ವೆಲ್‌ಗಳನ್ನು ಕೊರೆಸಿ ಕೊಡಬೇಕು. ಬೇರೆ ಕ್ಷೇತ್ರಗಳಲ್ಲಿ ಬೋರ್‌ವೆಲ್‌ಗಳು ಕೆಟ್ಟು ಹೋಗಿವೆಯೆಂದು ಹೇಳಿದಿರಿ. ಆದರೆ ನಮ್ಮ ಕ್ಷೇತ್ರದಲ್ಲಿ ಬೋರ್‌ವೆಲಗಳು ಬತ್ತಿ ಹೋಗಿವೆ. 400 ಅಡಿಯವರೆಗೂ ಕೊರೆದರೂ ನೀರು ಸಿಕ್ಕಿಲ್ಲ. ಕುಡಿಯುವ ನೀರಿನ ಬಹಳ ತೊಂದರೆಯಾಗಿದೆ. ನಾವು ಹಳ್ಳಿಗಳಿಗೆ ಹೋಗಿ ಯಾವುದಾದರೂ ಸಮಸ್ಯೆಯ ಬಗ್ಗೆ ವಿಚಾರಿಸಲಿಕ್ಕೆ ತೊಂದರೆಯಾಗುತ್ತಿದೆ. ಏಕೆಂದರೆ ಹಳ್ಳಿಯವರು ನಮ್ಮನ್ನು ಬಿಡುತ್ತಿಲ್ಲ. ಕುಡಿಯಲಿಕ್ಕೆ ನೀರು ಕೊಡದೆ ನೀವೇನು ವಿಚಾರಿಸಲಿಕ್ಕೆ ಬರುತ್ತಾ ಇದ್ದೀರಿ ಎಂದು ಕೇಳುತ್ತಾರೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಭಾಷಣ ಮಾಡುವುದು ಬೇಡ. ಹಾಗೆ ಮಾಡುವ ಹಾಗೆ ಇಲ್ಲ. ನಿಮ್ಮ ಸಮಸ್ಯೆ ಗೊತ್ತಾಯಿತು.

ಶ್ರೀ ಬಿ.ನಂಜಾಮರಿ:- ಕುಡಿಯುವ ನೀರಿನ ವ್ಯವಸ್ಥೆ ಏನು ಮಾಡುತ್ತೀರಿ ಎಂದು ತಿಳಿಸಬೇಕು.

ಅಧ್ಯಕ್ಷರು:- ವ್ಯವಸ್ಥೆ ಮಾಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ:-

ಎಲ್ಲಿ ಕೊಳವೆ ಬಾವಿಗಳು ಕೆಟ್ಟು ಹೋಗಿವೆ, ಎಲ್ಲಿ ಕೊಳವೆ ಬಾವಿಗಳಿಂದ ನೀರು ಬರುತ್ತಿಲ್ಲ, ಸರ್ಕಾರ ಈಗಾಗಲೇ ತನ್ನ ನೀತಿಯನ್ನು ಸ್ಪಷ್ಟ ಮಾಡಿದೆ. ಕುಡಿಯುವ ನೀರಿನ ಬಗ್ಗೆ ಸರ್ಕಾರ ಆದ್ಯತೆಯನ್ನು ಎಲ್ಲಾ ತಾಲ್ಲೂಕುಗಳಿಗೂ ಕೊಡುತ್ತದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಆದೇಶ ಹೋಗಿದೆ. ಮಾನ್ಯ ಕಂದಾಯ ಸಚಿವರು ಮತ್ತು ಗ್ರಾಮೀಣ ಸಚಿವರು ಇನ್ನು ಹತ್ತು ದಿವಸಗಳಲ್ಲಿ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ಕೊಡುವವರು ಇದ್ದಾರೆ. ಬಹುಶಃ ಎಲ್ಲೆಲ್ಲಿ ಕುಡಿಯುವ ನೀರಿನ ಕೊರತೆಯಿದೆ ನಿಮ್ಮ ತಾಲ್ಲೂಕು ಸೇರಿ ಈ ನೀರಿನ ಕೊರತೆಯನ್ನು ಇನ್ನು 2 ತಿಂಗಳಿನಲ್ಲಿ ನೀಗಿಸಲಿಕ್ಕೆ ನಾವು ಕ್ರಮವನ್ನು ಕೈಗೊಂಡಿದ್ದೇವೆ. ನೀರಿಗೋಸ್ಕರ ಈ ವರ್ಷ 1995-96ರಲ್ಲಿ 136 ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಇನ್ನು ಹೆಚ್ಚಿಗೆ ಹಣ ಬೇಕಾದರೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ ನೀರಿನ ಕೊರತೆಯನ್ನು ನೀಗಿಸುತ್ತೇವೆ.

ಶ್ರೀ ಬಿ.ನಂಜಾಮರಿ:- ಮಾನ್ಯ ಅಧ್ಯಕ್ಷರೆ, ಎರಡು ತಿಂಗಳು ಲೇಟಾಗುತ್ತದೆ. 118 ಬೋರ್‌ವೆಲ್‌ಗಳು ಬತ್ತಿ ಹೋಗಿವೆ ಅದಕ್ಕೆ ಬದಲಿ ವ್ಯವಸ್ಥೆಯನ್ನು ಅತೀ ಶೀಘ್ರದಲ್ಲಿಯೇ ಮಾಡಬೇಕು. ಎರಡು ತಿಂಗಳು ಎಂದು ಹೇಳುತ್ತಿದ್ದಾರೆ. ಚುನಾವಣೆ ಬಂತು, ಚುನಾವಣೆಯ ಸಂದರ್ಭದಲ್ಲಿ ನಾವು ಹಳ್ಳಿಗಳಿಗೆ ಹೋಗುವ ಹಾಗೆಯೇ ಇಲ್ಲ. ದಯವಿಟ್ಟು ನಮ್ಮ ತಾಲ್ಲೂಕಿನಲ್ಲಿ ಶೀಘ್ರದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ ಆದೇಶವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು:- ನೀವು ತೆಂಗಿನ ಕಾಯಿ ವ್ಯಾಪಾರವನ್ನು ಮಾಡುತ್ತೀರಿ, ಒಂದೇ ಸಾರಿ ದೆಹಲಿಯಿಂದ ಒಬ್ಬ ಪಾರ್ಟಿ ಫೋನ್ ಮಾಡಿ 10 ಲಕ್ಷ ತೆಂಗಿನ ಕಾಯಿ ಬೇಕೆಂದರೆ ಒಂದೇ ದಿವಸ ಕಳುಹಿಸಿ ಬಿಡುತ್ತೀರೋ? ಸ್ವಲ್ಪ ಟೈಮ್ ಕೊಡಪ್ಪ ಮಾರ್ಕೆಟ್ ನೋಡಿ ಮಾಡುತ್ತೇನೆಂದು ಹೇಳುತ್ತೀರಿ.

ಶ್ರೀ ಬಿ.ನಂಜಾಮರಿ:- ಮಾನ್ಯ ಅಧ್ಯಕ್ಷರೆ, ತೆಂಗಿನ ಕಾಯಿ ವ್ಯಾಪಾರಕ್ಕೂ ಕುಡಿಯುವ ನೀರಿಗೂ ಸಂಬಂಧವಿಲ್ಲ ಅಧ್ಯಕ್ಷರೆ.....

ಅಧ್ಯಕ್ಷರು:- ಎಲ್ಲಾ ವ್ಯವಹಾರ ಸರ್ಕಾರವನ್ನು ನಡೆಸಬೇಕಾದರೆ.....

ಶ್ರೀ ಬಿ.ನಂಜಾಮರಿ:- ನೀರು ಇಲ್ಲದಿದ್ದರೆ ಯಾವ ಜೀವವೂ 1 ಗಂಟೆ ತಡೆದುಕೊಳ್ಳಲಿಕ್ಕೆ ಶಕ್ತಿಯಿಲ್ಲ. ಒಂದು ಹೊತ್ತು ಊಟ ಇಲ್ಲದಿದ್ದರೆ ತಡೆದುಕೊಳ್ಳುತ್ತಾರೆ. ನೀರು ಇಲ್ಲದಿದ್ದರೆ ತಡೆದುಕೊಳ್ಳಲಿಕ್ಕೆ ಆಗುವುದೇ ಇಲ್ಲ. ಜಾನುವಾರು, ಪಕ್ಷಿ, ಮನುಷ್ಯರು ಎಲ್ಲರಿಗೂ ನೀರು ಬೇಕು. ನಮ್ಮ ತಾಲ್ಲೂಕಿನಲ್ಲಿ ಕುರಿ, ಮೇಕೆ, ದನಕರು ಎಲ್ಲವುಗಳಿಗೆ ಬೋರ್‌ವೆಲ್‌ಗಳಿಂದಲೇ ನೀರು ತೆಗೆದು ಕುಡಿಸಬೇಕಾಗಿದೆ. ನೀರಿನ ತೊಂದರೆಯಿದೆ ಆದ್ದರಿಂದ ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸದಸ್ಯರಾದ ನಂಜಾಮರಿಗೆ ಇಷ್ಟು ಆಶ್ವಾಸನೆಯನ್ನು ಕೊಡುತ್ತೇನೆ, 10 ದಿವಸಗಳಲ್ಲಿ ಮಾನ್ಯ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಪ್ರವಾಸ ಹೋಗುತ್ತಾರೆ ಅವರು ನಿಮ್ಮ ಜಿಲ್ಲೆಗೂ ಬರುತ್ತಾರೆ. ನಿಮ್ಮ ತಾಲ್ಲೂಕಿನ ವಿಚಾರವನ್ನು ಜಿಲ್ಲಾಧಿಕಾರಿಗಳು

ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ತೆಗೆಯುತ್ತಾರೆ. ಎಲ್ಲೆಲ್ಲಿ ನೀರಿನ ಕೊರತೆಯಿದೆ, ಆ ನೀರಿನ ಕೊರತೆಯನ್ನು ನಮ್ಮ ಸರ್ಕಾರ ನೀಗಿಸಲಿಕ್ಕೆ ಆದ್ಯತೆಯ ಮೇಲೆ ಹಣವನ್ನು ಒದಗಿಸುತ್ತದೆ. ಬಾಕಿ ಇರತಕ್ಕ ಕೆಲಸ ನಿಂತರೂ ಪರವಾಗಿಲ್ಲ.

ವಿಷಯ:- ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗಾಗಿ ಹಾಕಿಕೊಂಡಿರುವ ಯೋಜನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 119(1040)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ಸರ್ಕಾರವು ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗಾಗಿ ಹಾಕಿಕೊಂಡಿರುವ ಯೋಜನೆಗಳು ಯಾವುವು?

ಆ) ಸರ್ಕಾರವು ಈ ಕಾರ್ಮಿಕರಿಗಾಗಿ ವಸತಿ, ಆರೋಗ್ಯ, ಶಿಕ್ಷಣ ಹಾಗೂ ಇತರೇ ಸೌಲಭ್ಯಗಳನ್ನು ಒದಗಿಸಿದೆಯೇ?

ಇ) ಒದಗಿಸಿದ್ದಲ್ಲಿ, ಮನೆ ನಿರ್ಮಾಣಕ್ಕೆ ತಗಲುವ ವೆಚ್ಚ ಮತ್ತು ಆರೋಗ್ಯಕ್ಕಾಗಿ ಆಸ್ಪತ್ರೆಗಳು ಎಷ್ಟು? ಹಾಗೂ ಶಿಕ್ಷಣದ ಅಂಗವಾಗಿ ಜಿಲ್ಲಾವಾರು ಸೌಲಭ್ಯಗಳನ್ನು ಪಡೆದ ಕುಟುಂಬಗಳು ಎಷ್ಟು?

ಈ) ಕೊಪ್ಪಳ ನಗರದಲ್ಲಿ ಬೀಡಿ ಕಾರ್ಮಿಕರಿಗೆ ಸರ್ಕಾರ ಮನೆಗಳನ್ನು ನಿರ್ಮಾಣ ಮಾಡಿದೆಯೇ?

ಉ) ಹಾಗಿದ್ದಲ್ಲಿ, ನಿರ್ಮಾಣ ಮಾಡಿದ್ದಲ್ಲಿ ಹೆಚ್ಚಿನ ಹಣವನ್ನು ನೀಡಿ ಒಳ್ಳೆಯ ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಸಿ.ಗುರುನಾಥ್(ಕಾರ್ಮಿಕ ಸಚಿವರು):- (ಅ) ಮತ್ತು (ಆ) ಕೇಂದ್ರ ಸರ್ಕಾರದವರು ಬೀಡಿ ಕಾರ್ಮಿಕರಿಗೆ ಕೇಂದ್ರ ಕಲ್ಯಾಣ ಸಂಸ್ಥೆಗಳ ಮೂಲಕ ಹಮ್ಮಿಕೊಂಡಿರುವ ವೈದ್ಯಕೀಯ, ವಸತಿ ನಿರ್ಮಾಣ, ವಿದ್ಯಾರ್ಥಿ ವೇತನ ಮತ್ತು ಸಾಮೂಹಿಕ ವಿಮಾ ಯೋಜನೆ ಇತ್ಯಾದಿ ಯೋಜನೆಗಳನ್ನು ರಾಜ್ಯ ಸರ್ಕಾರದ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ.

ಇ) ಆರೋಗ್ಯದ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಯಲ್ಲಿ ಹಾಗೂ ಇ.ಎಸ್.ಐ. ಯೋಜನೆಯಡಿಯಲ್ಲಿ ಸದರಿ ಕಾರ್ಮಿಕರು ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಾರೆ.

ಈ) - ಇಲ್ಲ -

ಉ) - ಉದ್ಭವಿಸುವುದಿಲ್ಲ -

ಶ್ರೀ ಸಂಗಣ್ಣ ಕರಡಿ:- ಮಾನ್ಯ ಅಧ್ಯಕ್ಷರೆ, ಬೀಡಿ ಕಾರ್ಮಿಕರ ಪ್ರಶ್ನೆಯನ್ನು ನಾನು ಎತ್ತಿದ್ದೇನೆ. ಮೂಲತಃ ಕಾರ್ಮಿಕರಿಗೆ ಮನೆಗಳನ್ನು ಸರ್ಕಾರ ಕಲ್ಪಿಸಿಕೊಡತಕ್ಕ ಯೋಜನೆ ಇದೆ. ಅದರ ನಿಗದಿತ ವೆಚ್ಚ ಎಷ್ಟೆಂದು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವೆಚ್ಚದ ನಿಗದಿತ ಪ್ರಮಾಣವನ್ನು ತೋರಿಸಿಲ್ಲ. ಅದನ್ನು ವಿವರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಇದರಲ್ಲಿ ನಾವು ಮಾಡತಕ್ಕ ಯೋಜನೆ ಏನಿದೆ, ಕೇಂದ್ರ ಸರ್ಕಾರದ ಕಲ್ಯಾಣ